**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.3289 /2023**

**CW-1** **PW: 1**

ಸಾಕ್ಷಿಯ ಹೆಸರು : ಭೀಮಪ್ಪ ನಾಗಪ್ಪ ಸಾತನಣ್ಣವರ್
ತಂದೆ /ಗಂಡನ ಹೆಸರು : ನಾಗಪ್ಪ
ವಯಸ್ಸು : 36 ವರ್ಷ
ಉದ್ಯೋಗ : ಪಿ ಎಸ್ ಐ ಗರಗ್ ಪೋ. ಠಾ.,
ವಾಸಸ್ಥಳ : ಗರಗ್.

**ದಿಃ 02.04.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಜುಲೈ 2022 ರಿಂದ ಜನವರ 2024 ರವರೆಗೆ ನವನಗರ ಪೊಲೀಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 07.08.2023 ರಲ್ಲಿ ರಂದು ಸಂಜೆ 4 ಗಂಟೆಯಿಂದ ಚಾಸಾ-6 ರವರು ಜೊತೆ ಗಸ್ತು ಕರ್ತವದಲ್ಲಿ ಇದ್ದಾಗ ಸಂಜೆ 6.45 ಗಂಟೆಯ ಸಮಯದಲ್ಲಿ ನವನಗರದ ಕ್ಯಾನ್ಸರ್ ಆಸ್ಪತ್ರೆಯ ಬಳಿ ನಾು ಕರ್ತವ್ಯ ನಿರ್ವಹಿಸುತ್ತಿದ್ದಾಗ ಆರ್ ಟಿ ಓ ಕಚೇರಿಯ ಬಳಿ ಇದ್ದ ಲಾ ಯ್ಯುನಿರ್ವಸಿಟಿಯ ಬಳಿ ಇಬ್ಬರು ಪುರುಷರು ಒಬ್ಬ ಮಹಿಳೆ ಮಾದಕ ವಸ್ತುವಾದ ಗಾಂಜಾವನ್ನು ಎಲ್ಲಿಂದಲೋ ಸಾಗಾಟ ಮಾಡಿಕೊಂಡು ಬಂದು ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ.

ಚಾಸಾ-19 ರವರು ಚಾಸಾ-2 ಮತ್ತು 3 ರವರು ಜೊತೆ ಮತ್ತು ಚಾಸಾ-7 ರಿಂದ 12 ರವರು ಜೊತೆ ಮತ್ತು ನಾನು ಹಾಗೂ ಚಾಸಾ-6 ರವರು ಜೊತೆ ಠಾಣೆಯಿಂದ ಸುಮಾರು 10.15 ಗಂಟೆಯ ಸಮಯಕ್ಕೆ ಲಾ ಯ್ಯುನಿರ್ವಸಿಟಿಯ ಬಳಿ ಆರ್ ಟಿ ಓ ಕಚೇರಿಯ ಮರೆಯಲ್ಲಿ ನಿಂತು ನೋಡಲಾಗಿ ಇಬ್ಬರು ಪುರುಷರು ಒಬ್ಬ ಮಹಿಳೆ ಸಾರ್ವಜನಿಕರನ್ನು ಕರೆದು ಚೀಟಿಯಲ್ಲಿ ಏನೋ ಕೊಡುವುದನ್ನು ಕಂಡುಬಂದಿರುತ್ತದೆ. ನಂತರ ನಮ್ಮ ಜೊತೆ ಇದ್ದ ಸಿಬ್ಬಂದಿಗಳು ಸದರಿ ಮೂರು ಜನರನ್ನು ಸುತ್ತುವರಿದು ದಾಳಿ ಮಾಡಿ ನಂತರ ಚಾಸಾ-19 ರವರು ಸದರಿ ಮೂರು ಜನರ ಹೆಸರನ್ನು ಕೇಳಿದಾಗ ಅವರಲ್ಲಿ ಒಬ್ಬ ವ್ಯಕ್ತಿಯು ತನ್ನ ಹೆಸರು ಮಹಮದ್ ಮುಕೀದ್ ಇನ್ನೊಬ್ಬ ಆಕಾಶ ಮಾರುತಿ ಮತ್ತೊಬ್ಬ ಮಹಿಳೆಯು ವೈಷ್ಣವಿ ಸುತಗಟ್ಟಿ ಎಂದು ತಿಸಿರುತ್ತಾರೆ. ತನಿಖಾಧಿಕಾರಿಯು ಸದರಿ ಮೂರು ಜನರು ಸ್ದಳದಲ್ಲಿ ಏಕೆ ನಿಂತಿದ್ದು ಎಂದು ಕೇಳಿದಾಗ ಅವರು ಸರಿಯಾದ ಉತ್ತರವನ್ನು ನೀಡಿರುವುದಿಲ್ಲ. ನತಂರ ಚಾಸ-19 ರವರು 1 ನೇ ಆರೋಪಿತಯ ಬಳಿ ಇದ್ದ ದ್ವಿ ಚಕ್ರ ವಾಹನ ಬಿಳಿ ಬಣ್ಣದ ಹೋಂಡಾ ಆಕ್ಟಿವಾವನ್ನು ಪರಿಶೀಲಿಸಲಾಗಿ ಸದರಿ ಬೈಕಿನ ಬಲ ಹ್ಯಾಂಡಲಿಗೆ ಗುಲಾಬಿ ಬಣ್ಣದ ಚೀಲವನ್ನು ನೇತು ಹಾಕಿದ್ದು ಕಂಡು ಬಂದ ಕಾರಣ ಚೀಲದಲ್ಲಿ ಏನು ಇದೆ ಎಂದು ವಿಚಾರಿಸಲಾಗಿ ಆಗ 1 ನೇ ಆರೋಪಿಯು ತಡವರಿಸುತ್ತಾ ಚೀಲದಲ್ಲಿ ಗಾಂಜಾ ಇದೆ ಎಂದು ಉತ್ತರಿಸಿರುತ್ತಾರೆ. ನಂತರ ಚಾಸಾ-19 ರವರು ಸದರಿ ಮೂರು

ಜನರನ್ನು ಅಂಗ ಶೋದೆನೆಯನ್ನು ಲಿಖಿತವಾಗಿ ಕೇಳಿದಾಗ ಪತ್ರಾಂಕಿತ ಅಧಿಕಾರಿಯ ಮುಂದೆ ಅಂಗಶೋಧನೆಯನ್ನು ಮಾಡಲು ಲಿಖಿತ ರೂಪದಲ್ಲಿ ಆರೋಪಿತರು ತಿಳಿಸಿದ ಮೇರೆಗೆ ತನಿಖಾಧಿಕಾರಿಯು ಎಸಿಪಿಯವರಾದ ಚಾಸಾ-13 ರವರಿಗೆ ಕರೆ ಮಾಡಿ ತಿಳಿಸಿ ಸ್ಥಳಕ್ಕೆ ಬರಲು ಹೇಳಿ ನಂತರ ತನಿಖಾಧಿಕಾರಿಯು 1 ನೇ ಆರೋಪಿಯ ದ್ವಿಚಕ್ರ ವಾಹನದ ಹ್ಯಾಂಡಲಿಗೆ ಹಾಕಿದ ಚೀಲವನ್ನು ತನಿಖಾಧಿಕಾರಿಯ ಮುಂದ ಹಾಜರುಪಡಿಸಿರುತ್ತಾರೆ. ಸದರಿ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ ಗಾಟು ವಾಸನೆಯ ಎಲೆಯ, ಹೂ, ಬೀಜ ಹಾಗೂ ಕಾಂಡ ಇರುವ ಗಾಂಜಾ ಇರುವುದು ಕಂಡಬಂದಿರುತ್ತದೆ. ತಕ್ಷಣ ಚಾಸಾ-19 ರವರು ಚಾಸಾ-9 ರವರ ಮೂಲಕ ತೂಕದ ಮೆಷಿನ ನಲ್ಲಿ ತೂ|ಗಿದಾಗ 130 ಗ್ರಾಂ ಗಾಂಜಾ ಇರುವುದು ಕಂಡುಬಂದಿರುತ್ತದೆ. ಸದರಿ ಗಾಂಜಾವನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಸುತ್ತಿ ಅರೆಗಿನ ಸೀಲನ್ನು ಪಂಚರ ಸಮಕ್ಷಮ ಹಾಕಲಾಗಿರುತ್ತದೆ. ನಂತರ ಚಾಸ-13 ರವರು ಬಂದ ನಂತರ ಆರೋಪಿತರ ಅಂಗಶೋದನೆಯನ್ನು ಮಾಡಲಾಗಿ 1 ನೇ ಆರೋಪಿಯಿಂದ ರೂ.500/- ನಗದು ಹಣ ಮತ್ತು ಒಂದು ದ್ವಿ ಚಕ್ರ ವಾಹನವನ್ನು ವಶಕ್ಕೆ ಪಡೆದುಕೊಳ್ಳಲಾಗಿರುತ್ತದೆ.

2 ನೇ ಆರೋಪಿಯಿಂದ 6 ಸಣ್ಣ ಪ್ಲಾಸ್ಟಿಕ್ ಪ್ಯಾಕೇಟಗಳನ್ನು ಮತ್ತು ರೂ.500/- ನಗದು ಹಣವನ್ನು ವಶಕ್ಕೆ ಪಡೆದುಕೊಳ್ಳಲಾಯಿತು. 3 ನೇ ಆರೋಪಿಯು ಮಹಿಳೆಯಾದ ಕಾರಣ ಮಾನ್ಯ ನ್ಯಾಯಾಲಯದ ಅನುಮತಿಯನ್ನು ತಿಳಿಸಿ ಚಾಸಾ-7 ರವರ ಮೂಲಕ ಆಕೆಯ ಅಂಗ ಶೋಧನೆಯನ್ನು ಮಾಡಲಾಗಿ 2 ಸಣ್ಣಪ್ಲಾಸ್ಟಿಕ್ ಪ್ಯಾಕೇಟಗಳನ್ನು ಮತ್ತು ರೂ.500/- ನಗದು ಹಣವನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಎಲ್ಲಾ ಮು ಮಾ ಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಸೀಲು ಮಾಡಿ ಅಮಾನತುಪಡಿಸಿಕೊಳ್ಳಲಾಯಿತು. ಸ್ಥಳದಲ್ಲಿ ಈ ಬಗ್ಗೆ ಪಂಚರ ಸಮಕ್ಷಮ ಪಂಚನಾಮೆ ಬರೆಯಲಾಗಿತ್ತು. ಚಾಸಾ-19 ರವರು ನನ್ನ , ಚಾಸಾ-2 ರಿಂದ 13 ರವರು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಚಾಸಾ-19 ರವರು ನನ್ನ ಹಾಗೂ ಚಾಸಾ-2 ರಿಂದ 13 ರವರ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿ ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಮಾಡಿದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನಿಪಿ-2 ರ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 21 ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸ್ಯಾಂಪಲ್ ನ್ನು ನೋಡಿ ಗುರುಸಿತಿರುತ್ತಾರೆ. 1 ನೇ ಆರೋಪಿಯ ಬಳಿ ಇದ್ದ ಸಾಕ್ಷಿ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರ ವಶದಿಂದ ವಶಪಡಿಸಿಕೊಂಡ 8 ಸಣ್ಣ ಪ್ಲಾಸ್ಟಿಕ್ ಕವರುಗಳು ಹಾಗೂ 500/- ರೂ. ಗಳ ನೋಟುಗಳನ್ನು ನೋಡಿ ಗುರುಸಿತಿರುತ್ತಾರೆ. ಪ್ಲಾಸ್ಟಿಕ್ ಕವರಗಳನ್ನು ಮು ಮಾ 2 ಎಂದು ಗುರುತಿಸಲಾಯಿತು. ನಗದು ಮೊತ್ತವನ್ನು ಮು ಮಾ 3 ಎಂದು ಗುರುತಿಸಲಾಯಿತು. ಮಾದರಿಗಾಗಿ ತೆಗೆದ ಗಾಂಜಾ ಪ್ಯಾಕೇಟನ್ನು ಮು ಮಾ 4 ಎಂದು ಗುರುತಿಸಲಾಯಿತು. 1 ನೇ ಆರೋಪಿಯ ವಶದಿಂದ ಹೋಂಡಾ ಆಕ್ಟಿವಾ ಸಂಖ್ಯೆ ಕೆಎ-25/ಹೆಚ್ ಜಿ-0332 ನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಸಾಕ್ಷಿಯು ನಿಪಿ-3 ರಿಂದ 21 ರಲ್ಲಿ ಇರುವ ದ್ವಿ ಚಕ್ರ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದೆ ಮುಂದೆ ಇರುವ ಅರೋಪಿತರನ್ನು ನೋಡಿ ಗುರುತಿಸಿರುತ್ತಾರೆ

ನಾನು ಘಟನೆಯ ಕುರಿತಾಗಿ ಮರು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 3 ನೇ ಆರೋಪಿ ಪರವಕೀಲರಿಂದಃ**

ಪೊ ಠಾ ಯಿಂದ ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳ 1 ಕೀ ಮೀ ದೂರದಲ್ಲಿ ಇತ್ತು. ಆರ್ ಟಿ ಓ ಕಚೇರಿಯ ಬಳಿ ಇದ್ದ ಲಾ ಯ್ಯುನಿರ್ವಸಿಟಿಯು ಮುಖ್ಯ ರಸ್ತೆಯಿಂದ 100 ಮೀ ದೂರದಲ್ಲಿ ಇದೆ. ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ರಾತ್ರಿ 9 ಗಂಟೆಯ ನಂತರ ಯಾರು ಓಡಾಡುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಿಂದ ನಾವು ರಾತ್ರಿ 10.15 ಕ್ಕೆ ಹೊರಟು 10.25 ಕ್ಕೆ ಸ್ಥಳಕ್ಕೆ ತಲುಪಿರುತ್ತೇವೆ. ಆರೋಪಿತರ ಬಳಿ 2-3 ಜನ ಸ್ಥಳದಲ್ಲಿ ನಿಂತಿದ್ದರು. ಘಟನೆ ನಡೆಯಿತು ಎಂದು ಹೇಳಲಾದ ಸ್ದಳದಲ್ಲಿ ಬೆಳಕಿನ ವ್ಯವಸ್ತೆ ಇಲ್ಲದ ಕಾರಣ ಯಾರು ಏನು ಮಾಡುತ್ತಿದಾರೆ ಎಂದು ವೀಕ್ಷಿಸಲು ಆಗುವುದಿಲ್ಲ ಎಂದರೆ ಸಾಕ್ಷಿಯು ಬೀದಿ ದೀಪ ಇತ್ತು ಎಂದು ನುಡಿಯುತ್ತಾರೆ. ಆರೋಪಿತರನ್ನು 30 ರಿಂದ 40 ಮೀ ದೂರದಲ್ಲಿ ನಿಂತು ನೋಡಿದ್ದೆವು. ನಾನು ಈ ಕೇಸಿನ ಕುರಿತಾಗಿ ಸುಳ್ಳು ಪಿರ್ಯಾದನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ ನಿಪಿ-1 ಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮು ಮಾ ಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲದೆ ಇದ್ದರೂ ಅವರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**1 ಮತ್ತು 2 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು 1 ಮತ್ತು 2 ನೇ ಆರೋಪಿತರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ರೂಪಾಯಿ 500/- ಖರ್ಚಿನೊಂದಿಗೆ ಸಮಯಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀಮತಿ ಶರ್ಮಿಳ ಕಾಮತ್ ಕೆ)**
**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**